**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 2003/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಜಿ.ಎಸ್. ರಘು | ಪ್ರಾಸಾಃ 5 |
| ತಂದೆಯ/ಗಂಡನ ಹೆಸರು | | ಜಿ.ಸಿದ್ದರಾಜು | ಚಾಸಾಃ 17 |
| ವಯಸ್ಸು | | 53 ವರ್ಷ | |
| ಕೆಲಸ | | ಡಿ.ವೈ.ಎಸ್.ಪಿ., ರಾಜ್ಯ ಗುಪ್ತ ವಾರ್ತೆ | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 07/08/2023 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಾನು 07.09.2012 ರಿಂದ 08.05.2015 ವರೆಗೂ ನಂಜನಗೂಡು ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಬದನವಾಳು ಪೊಲೀಸ್ ಠಾಣೆಯು ನನ್ನ ವ್ಯಾಪ್ತಿಗೆ ಸೇರಿರುತ್ತದೆ.

ಈ ಪ್ರಕರಣದ ಕಡತವನ್ನು ಚಾಸಾ-16 ರವರಿಂದ ದಿನಾಂಕ 22.05.2014 ರಂದು ರಂದು ಸ್ವೀಕರಿಸಿ ಅದುವರೆಗಿನ ತನಿಖೆಯನ್ನು ಪರಿಶೀಲಿಸಿ, ಅದುವರೆಗಿನ ತನಿಖೆಯು ಸಮಂಜಸವಾದ್ದರಿಂದ ತನಿಖೆಯನ್ನು ಮುಂದುವರೆಸಿರುತ್ತೇನೆ.

ಅದೇ ದಿನ ಚಾಸಾ-11 ರವರು ಆರೋಪಿಯನ್ನು ಹಾಜರುಪಡಿಸಿದ ಮೇರೆಗೆ ದಸ್ತಗಿರಿ ಕ್ರಮ ಅನುಸರಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಚಾಸಾ-11 ರವರು ಬಸ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿರುತ್ತೇನೆ. ಚಾಸಾ-11 ರವರಿಂದ ನಷ್ಟ ಭರ್ತಿ ಪ್ರಮಾಣ ಪತ್ರ ಪಡೆದು ಬಸ್ ಅನ್ನು ಅವರ ಮಧ್ಯಂತರ ವಶಕ್ಕೆ ನೀಡಿರುತ್ತೇನೆ.

ದಿನಾಂಕ 31.05.2014 ರಂದು ಚಾಸಾ-12 ರವರಿಂದ ಮೃತ ರಾಜಣ್ಣ ರವರ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ಮತ್ತು 5 ರವರ ಮರು ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಮತ್ತು ಚಾಸಾ-7, 8, 9, 14 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿನಾಂಕ 12.09.2014 ರಂದು ಚಾಸಾ-13 ರವರಿಂದ ಅಪಘಾತಕ್ಕೆ ಒಳಗಾದ ವಾಹನಗಳ ಎಂ.ವಿ.ಎ ವರದಿಗಳನ್ನು ಸ್ವೀಕರಿಸಿರುತ್ತೇನೆ.

ದಿನಾಂಕ 19.05.2014 ರಂದು ಆರೋಪಿ ಮತ್ತು ಚಾಸಾ-9 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ.

ನಂತರ ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಬಸ್ ಮತ್ತು ದ್ವಿಚಕ್ರ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-3 ರಿಂದ 6 ಫೋಟೋಗಳಲ್ಲಿ ಇರುವ ಬಸ್ ಮತ್ತು ದ್ವಿಚಕ್ರ ವಾಹನವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ಆರೋಪಿ ಮತ್ತು ಚಾಸಾ-9 ರವರ ಕರ್ತವ್ಯ ದೃಡೀಕರಣ ಪತ್ರವಾಗಿದ್ದು ಅದನ್ನು ನಿಪಿ-14 ಎಂದು, ಸಾಕ್ಷಿಯ ರುಜುವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ಮೃತ ರಾಜಣ್ಣ ಶವ ಪರೀಕ್ಷಾ ವರದಿಯಾಗಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ಎಂ.ವಿ.ಎ ವರದಿಯಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಎಂ.ವಿ.ಎ ವರದಿಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ವಾಹನದ ಆಯಾ ದಿನದ ನಿವೇದನ ಪತ್ರವಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಚಾಸಾ-1 ಮತ್ತು 5 ರವರ ಮರು ಹೇಳಿಕೆ ಮತ್ತು ಚಾಸಾ-7 ರಿಂದ 9, 14 ಮತ್ತು 15 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆರೋಪಿಯ ತಪ್ಪಿರದೇ ಇದ್ದರೂ ಕೂಡ ಆತನ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಮೃತನ ಕುಟುಂಬಸ್ಥರಿಗೆ ಪರಿಹಾರ ದೊರಕಲಿ ಎನ್ನುವ ಕಾರಣಕ್ಕೆ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಮರ್ಪಕ ತನಿಖೆ ಕೈಗೊಳ್ಳದೇ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

sd/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**